# ನಾರ್ಟನ್ ಫ್ಯಾಮಿಲಿ; 6 ತಿಂಗಳು ಉಚಿತ

■ ಶಶಿಕುಮಾರ್ ಸಿ.



ಸೈಬರ್ ಸೆಕ್ಯುರಿಟಿ ಸೇವೆ ಒದಗಿಸುವ ಕಂಪನಿಗಳ ಪೈಕಿ ಒಂದಾಗಿರುವ ನಾರ್ಟನ್ ಲೈಫ್ ಲಾಕ್ ಕಂಪನಿಯು ತನ್ನ 'ನಾರ್ಟನ್ ಫ್ಯಾಮಿಲಿ' ಸಾಫ್ಟ್‌ವೇರ್ ಅನ್ನು ಲಾಕ್‌ಡೌನ್ ನಿಮಿತ್ತವಾಗಿ ಆರು ತಿಂಗಳ ಅವಧಿವರೆಗೆ ಉಚಿತವಾಗಿ ಉಪಯೋಗಿಸುವ ಅವಕಾಶವನ್ನು ಗ್ರಾಹಕರಿಗೆ ಕಲ್ಪಿಸಿದೆ.

ಮಕ್ಕಳ ಮತ್ತು ವಿದ್ಯಾರ್ಥಿಗಳ ಆನ್‌ಲೈನ್ ಚಟುವಟಿಕೆಯ ಮೇಲೆ ನಿಗಾವಹಿಸುವ ಹಾಗೂ ಅಪಾಯಕಾರಿ ತಂತ್ರಾಂಶಗಳಿಂದ ಬಳಸುವ ಡಿವೈಸ್‌ಗಳಿಗೆ ಸುರಕ್ಷತೆ ಒದಗಿಸುವ ಕಾರ್ಯವನ್ನು 'ನಾರ್ಟನ್ ಫ್ಯಾಮಿಲಿ' ಸಾಫ್ಟ್‌ವೇರ್ ಮಾಡುತ್ತದೆ.

ಕೊರೊನಾ ವೈರಸ್‌ನ ಭೀತಿಯಿಂದಾಗಿ ಬಹುತೇಕರು ಮನೆಗಳಲ್ಲಿಯೇ ಉಳಿದಿದ್ದಾರೆ. ಹೊರಗಡೆ ಅವಕಾಶವಿಲ್ಲದ ಕಾರಣಕ್ಕೆ ಮಕ್ಕಳು ಮೊಬೈಲ್‌ಗಳ ಮೇಲೆ ಅತಿಯಾಗಿ ಅವಲಂಬಿತರಾಗುತ್ತಿದ್ದಾರೆ. ಆನ್‌ಲೈನ್ ಮೂಲಕ ಮಕ್ಕಳು ಹೆಚ್ಚು ಹೆಚ್ಚು ಇಂಟರ್ನೆಟ್ ಆಧಾರಿತ ಸಾಧನಗಳಲ್ಲಿ ಕಾಲ ಕಳೆಯುವುದರ ಜೊತೆಗೆ ಆಟ, ಮನರಂಜನೆ ಮತ್ತು ಅಧ್ಯಯನಕ್ಕೆ ಈ ಸಾಧನಗಳನ್ನು ಹೆಚ್ಚು ಬಳಕೆ ಮಾಡುತ್ತಿದ್ದಾರೆ. ಇದನ್ನೇ ದುರುಪಯೋಗ ಪಡಿಸಿಕೊಳ್ಳುವ ಕೆಲವರು ಸೈಬರ್ ದಾಳಿ ಮಾಡುವ ಸಾಧ್ಯತೆ ಇದೆ. ಜೊತೆಗೆ ಆನ್‌ಲೈನ್ ಬೆದರಿಕೆಗಳಿಗೆ ಎಡೆ ಮಾಡಿಕೊಡುತ್ತದೆ. ಇಂತಹ ಸಂದರ್ಭದಲ್ಲಿ ಮಕ್ಕಳ ಮತ್ತು ವಿದ್ಯಾರ್ಥಿಗಳ ಆನ್‌ಲೈನ್ ಚಟುವಟಿಕೆ ಮೇಲೆ ನಿಗಾವಹಿಸಿ ಪೋಷಕರ ಗಮನಕ್ಕೆ ಈ ಸಾಫ್ಟ್‌ವೇರ್ ತರುತ್ತದೆ.

Norton LifeLock

ಈಚೆಗೆ ಬಿಡುಗಡೆಯಾದ ನಾರ್ಟನ್ ಲೈಫ್ ಲಾಕ್ ಸೈಬರ್ ಸೇಫ್ಟಿ ಇನ್‌ಸೈಟ್ಸ್ ವರದಿಯ ಪ್ರಕಾರ, ಆನ್‌ಲೈನ್ ಚಟುವಟಿಕೆ ವೇಳೆ ಕಾಣಿಸಿಕೊಳ್ಳುವ ಕೆಲವೊಂದು ಲಿಂಕ್‌ಗಳನ್ನು ಕ್ಲಿಕ್ಕಿಸುವ ಭಾರತದ ಪ್ರತಿ 10 ಮಂದಿ ಪೈಕಿ ನಾಲ್ವರು ಸೈಬರ್ ದಾಳಿ ಅಥವಾ ಆನ್‌ಲೈನ್ ಬೆದರಿಕೆಯಂತಹ ಅನುಭವ ಹೊಂದುತ್ತಿದ್ದಾರೆ.

### ಡೌನ್‌ಲೋಡ್ ಹೇಗೆ?

ಕಂಪನಿಯ ಅಧಿಕೃತ ವೆಬ್‌ಸೈಟ್ ಆದಂತಹ family.norton.comಗೆ ಮೊದಲು ಭೇಟಿ ನೀಡಿ ಹೆಸರು ನೋಂದಾಯಿಸಿಕೊಳ್ಳಬೇಕು. ನೋಂದಣಿ ಪ್ರಕ್ರಿಯೆಗೆ ಯಾವುದೇ ರೀತಿಯ ಹಣ ಪಾವತಿಸುವ ಮತ್ತು ಹಣ ಪಾವತಿಸಲು ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್‌ಗಳ ಮಾಹಿತಿ ಅಗತ್ಯವಿಲ್ಲ. ಬಳಿಕ ಸಾಫ್ಟ್‌ವೇರ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಉಪಯೋಗಿಸಬಹುದು. ಈ ಸೌಲಭ್ಯವು ಮೇ ತಿಂಗಳ ಅಂತ್ಯದವರೆಗೂ ಲಭ್ಯವಿದೆ. ಡೌನ್‌ಲೋಡ್ ಮಾಡಿಕೊಂಡ ದಿನದಿಂದ ಆರು ತಿಂಗಳವರೆಗೆ ಈ ಸಾಫ್ಟ್‌ವೇರ್‌ನ ಸೇವೆ ಪಡೆಯಬಹುದು. ■

## ಪಿಎಂ ಕೇರ್ಸ್
## ನಕಲಿ ಐಡಿ; ಇರಲಿ ಎಚ್ಚರ

ಕೊರೊನಾ ವೈರಸ್ ಸಂಪೂರ್ಣವಾಗಿ ತಡೆಗಟ್ಟಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪಣತೊಟ್ಟಿದ್ದು, ಅದಕ್ಕಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿವೆ. ಈ ಕಾರ್ಯಕ್ಕೆ ಹಣದ ನೆರವು ಅತ್ಯಗತ್ಯವಿದ್ದು, ಕೇಂದ್ರ ಸರ್ಕಾರವು ಹಣದ ಸಹಾಯಕ್ಕಾಗಿ ಸಾರ್ವಜನಿಕರಿಗೆ ಮನವಿ ಮಾಡಿತ್ತು. ಆದರೆ, ಕೆಲ ದುಷ್ಕರ್ಮಿಗಳು ಸಂದರ್ಭವನ್ನು ದುರುಪಯೋಗ ಪಡಿಸಿಕೊಂಡು ನಕಲಿ ಐಡಿ ಸೃಷ್ಟಿಸಿ ಅದನ್ನು ವೈರಲ್ ಮಾಡಿ ಕೇಂದ್ರ ಸರ್ಕಾರದ ಹೆಸರಿನಲ್ಲಿ ಹಣವನ್ನು ಸಂಗ್ರಹಿಸಿದ ವಿಚಾರ ಬೆಳಕಿಗೆ ಬಂದಿದೆ.

### ಯಾವುದು ಅಸಲಿ/ನಕಲಿ?

ಪ್ರಧಾನ ಮಂತ್ರಿ ನಾಗರಿಕ ಸಹಕಾರಿ ಯೋಜನೆಯ ಮೂಲಕ ಕೇಂದ್ರ ಸರ್ಕಾರವು ಪಿಎಂ ಕೇರ್ಸ್ ದೇಣಿಗೆ ಸಂಗ್ರಹಕ್ಕೆ pmcares@sbi ಎಂಬ ಯುಪಿಐ ಐಡಿಯನ್ನು ಸೃಷ್ಟಿಸಿದೆ. ಇದು ಅಧಿಕೃತವಾದ ಐಡಿ. ದೇಣಿಗೆ ನೀಡಬಯಸುವವರು ಇದೇ ಐಡಿಗೆ ಹಣ ಕಳುಹಿಸಬೇಕು. ಆದರೆ, ಕೆಲ ಕಿಡಿಗೇಡಿಗಳು ಅಧಿಕೃತ ಐಡಿಯನ್ನೇ ನಕಲು ಮಾಡಿ pmcares@sbi ಬದಲು pmcare@sbi (s ಅಕ್ಷರವನ್ನು ತೆಗೆದು) ಎಂಬ ನಕಲಿ ಯುಪಿಐ ಐಡಿಯನ್ನು ಸೃಷ್ಟಿಸಿ, ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡಿ ಲಕ್ಷಾಂತರ ರೂಪಾಯಿ ಹಣ ಸಂಗ್ರಹಿಸಿದ್ದಾರೆ.

ಈ ಬಗ್ಗೆ ಎಚ್ಚೆತ್ತುಕೊಂಡಿರುವ ಕೇಂದ್ರ ಸರ್ಕಾರವು ಪ್ರೆಸ್ ಇನ್‌ಫಾರ್ಮೇಷನ್ ಬ್ಯೂರೊ ಕಡೆಯಿಂದ ಸತ್ಯಾಂಶದ ಕುರಿತ ವರದಿಯೊಂದನ್ನು ಬಿಡುಗಡೆ ಮಾಡಿದೆ. ಅಲ್ಲದೆ ಟ್ವೀಟ್ ಮತ್ತು ಪ್ರಕಟಣೆ ಮೂಲಕ ನಕಲಿ ಹಾಗೂ ಅಸಲಿ ಐಡಿಯ ಬಗ್ಗೆ ಫ್ಯಾಕ್ಟ್‌ಚೆಕ್ ಮಾಡಿ, ನಕಲಿ ಹಾಗೂ ಅಸಲಿಯ ನಡುವಿನ ವ್ಯತ್ಯಾಸದ ಬಗ್ಗೆ ಜಾಗೃತಿ ಮೂಡಿಸುತ್ತಿದೆ.

